ಅ) ಮತ್ತು ಆ) ತೆಲಂಗಾಣ ರಾಜ್ಯವು ಕಾಗಿಣಾ ನೀರನ್ನು ಕಬಳಿಸುವ ಬಗ್ಗೆ ಸರ್ಕಾರಕ್ಕೆ ಯಾವುದೇ ಅಧಿಕೃತ ಮಾಹಿತಿ ಲಭ್ಯವಿರುವುದಿಲ್ಲ.

ಆದಾಗ್ಯೂ ತೆಲಂಗಾಣ ರಾಜ್ಯದ ರಂಗಾರೆಡ್ಡಿ ಜಿಲ್ಲೆಯ ತಾಂಡೂರು ಪಟ್ಟಣದ ಜನರ ಕುಡಿಯುವ ನೀರಿಗಾಗಿ ಕಾಗಿಣಾ ನದಿಗೆ ಅಡ್ಡಲಾಗಿ ನಾಣಾಪುರ ಗ್ರಾಮದ ಹತ್ತಿರ ಚೆಕ್ ಡ್ಯಾಮ್ ನಿರ್ಮಿಸುವ ಯೋಜನೆ ಕೈಗೊಳ್ಳಲು ರೂಪಿಸಲಾಗಿದೆಯೆಂದು ಹಾಗೂ ಕಾಮಗಾರಿಯು ಇನ್ನೂ ಪ್ರಾರಂಭವಾಗಿರುವುದಿಲ್ಲವೆಂದು ತಿಳಿದುಬಂದಿದೆ.

ಇ) ತೆಲಂಗಾಣ ರಾಜ್ಯದ ಕ್ರಮಗಳಿಂದಾಗಿ ರಾಜ್ಯದ ಗಡಿ ಗ್ರಾಮಗಳಲ್ಲಿ ನೀರಿನ ತೊಂದರೆಯಾದಲ್ಲಿ ಸರ್ಕಾರವು ಸೂಕ್ತವಾಗಿ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.

ಸವಣೂರು ಏತ ನೀರಾವರಿ ಯೋಜನೆ

897 (1592); ಶ್ರೀ ಬಸವರಾಜ.ಎಸ್.ಬೊಮ್ಮಾಯಿ (ಶಿಗ್ಗಾಂವ್)

ಅ) ಸವಣೂರು ಏತ ನೀರಾವರಿ ಯೋಜನೆಗೆ ಸರ್ಕಾರ ಆಡಳಿತಾತ್ಮಕ ಯೋಜನೆ ಮಂಜೂರು ಮಾಡಿದೆಯೇ [ಯೋಜನೆಯ ವಿವರಗಳನ್ನು ಒದಗಿಸುವುದು];

ಆ) ಈ ಯೋಜನೆ ಯಾವ ಹಂತದಲ್ಲಿದೆ; ಯಾವಾಗ ಕಾಮಗಾರಿ ಪ್ರಾರಂಭ ಮಾಡಲಾಗುವುದು;

ಇ) ಈ ಯೋಜನೆಗೆ ವೇಗವರ್ಧಕ ನೀರಾವರಿ ಫಲಾನುಭವಿ ಕಾರ್ಯಕ್ರಮ (Accelerated Irrigation Benefit Programme) ಅಡಿಯಲ್ಲಿ ಕೇಂದ್ರದ ಅನುದಾನ ತರುವುದಕ್ಕೆ ರಾಜ್ಯ ಸರ್ಕಾರ ತೀರ್ಮಾನಿಸಿದೆಯೇ?

ಶ್ರೀ ಎಂ.ಬಿ. ಪಾಟೀಲ (ಜಲ ಸಂಪನ್ಮೂಲ ಸಚಿವರು)

ಅ) ಸವಣೂರು ಏತ ನೀರಾವರಿ ಯೋಜನೆಯ ಪ್ರಸ್ತಾವನೆಗೆ ಸರ್ಕಾರದ ಆದೇಶ ಸಂ. ಜಸಂಇ 13 ಎಂಎಂಬಿ 2013 ದಿನಾಂಕ 30.10.2013 ರಲ್ಲಿ ₹ 690.00 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಈ ಯೋಜನೆಯು ಸವಣೂರು ತಾಲ್ಲೂಕಿನ ಕಳಸೂರು ಗ್ರಾಮದ ಬಳಿ ಇರುವ ಕಳಸೂರು ಬ್ಯಾರೇಜ್‌ನಿಂದ 1.50 ಟಿ.ಎಂ.ಸಿ. ನೀರನ್ನು ಏತ ನೀರಾವರಿ ಮೂಲಕ ಎತ್ತಿ ಸವಣೂರು ತಾಲ್ಲೂಕಿನ 9 ಕೆರೆಗಳನ್ನು ತುಂಬಿಸುವುದು ಹಾಗೂ ಹನಿ ನೀರಾವರಿ ಯೋಜನೆಯಿಂದ ಸವಣೂರು ತಾಲ್ಲೂಕಿನ ಸುಮಾರು 15500 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಕಲ್ಪಿಸಲು ಯೋಜಿಸಲಾಗಿರುತ್ತದೆ.

ಆ) ಪ್ರಸ್ತುತ ಯೋಜನೆಗೆ ಸಂಬಂಧಿಸಿದ ಜಾಕ್‌ವೆಲ್ ಮತ್ತು ಪಂಪ್‌ಹೌಸ್, ಇನ್‌ಟೇಕ್ ಚಾನಲ್, ಡೆಲಿವರಿ ಛೇಂಬರ್, ರೈಸಿಂಗ್ ಮೇನ್ ಮತ್ತು ವಿದ್ಯುತ್ ಉಪಕೇಂದ್ರ ನಿರ್ಮಾಣಕ್ಕೆ ಸಂಬಂಧಿಸಿದಂತೆ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಶೀಘ್ರದಲ್ಲಿಯೇ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಇ) ಕೇಂದ್ರ ಜಲ ಆಯೋಗ/ಕೇಂದ್ರ ಜಲಸಂಪನ್ಮೂಲ ಮಂತ್ರಾಲಯ, ನವದೆಹಲಿರವರ ಎ.ಐ.ಬಿ.ಪಿ. ಮಾರ್ಗಸೂಚಿಯನ್ವಯ ಯಾವುದೇ ಯೋಜನೆಗೆ ಎ.ಐ.ಬಿ.ಪಿ. ಅಡಿಯಲ್ಲಿ ಕೇಂದ್ರ ಧನಸಹಾಯ ಪಡೆಯಬೇಕಾದಲ್ಲಿ ಯೋಜನಾ ವರದಿಗೆ ಕೇಂದ್ರ ಜಲ ಆಯೋಗ ಹಾಗೂ ಕೇಂದ್ರ ಯೋಜನಾ ಆಯೋಗದಿಂದ ಅನುಮೋದನೆ ಪಡೆಯಬೇಕಾಗಿರುತ್ತದೆ ಹಾಗೂ ಶೇಕಡ 50 ರಷ್ಟು ಆರ್ಥಿಕ ಹಾಗೂ ಭೌತಿಕ ಪ್ರಗತಿ ಸಾಧಿಸಬೇಕಾಗಿರುತ್ತದೆ. ಪ್ರಸ್ತುತ ಈ ಯೋಜನೆಯು ಪ್ರಾರಂಭಿಕ ಹಂತದಲ್ಲಿರುತ್ತದೆ.